ಮಾತನ್ನು ಯಾರನ್ನು ಉದ್ದೇಶಿಸಿ ಆಕೆ ಹೇಳಿದ್ದಾಳೆ ಎಂಬುದು ಫೈಜಾಳ ಅಂತರ್ಯಕ್ಕೆ ತಿಳಿಯಿತು. ಅವಳೇನೂ ಉತ್ತರಿಸುವ ಗೋಜಿಗೆ ಹೋಗಲಿಲ್ಲ.

''ಕಾಲೇಜಿಗೂ ಹೋಗುತ್ತಿರಲಿಲ್ಲವಂತೆ" ಎಂದು ಇನ್ನೊಂದು ಧ್ವನಿ ಕೊಂಕು ತೆಗೆಯಿತು. "ಯಾರಿಗೆ ಗೊತ್ತು... ಏನಾದರೂ ಪರಿಯೋಂಕ ಸಾಯ ಆಗಿರಬೇಕು. ಹಗಲು ರಾತ್ರಿ ಆ ದಿನಗಳಲ್ಲಿ ಈ ದಿನಗಳಲ್ಲಿ ಕೂದಲು ಬಿಟ್ಟು ಕೊಂಡು ಓಡಾಡ್ತಾರಲ್ಲ. ಯಾರೋ ಪರಿ ಹೆಗಲೇರಿರಬೇಕು. ನಮಗೇನು ಗೊತ್ತಾಗುತ್ತೆ?'' ಇಷ್ಟು ಸಾಲದು ಎಂಬಂತೆ ಅಲ್ಲಿ ಕುಳಿತಿದ್ದ ಖಾತೂನ್ ಚಿಕ್ಕಮ್ಮ ತನ್ನ ಪಕ್ಕದವಳೊಡನೆ ಮಾತನಾಡುತ್ತಾ, ''ಅಬ್ಬಾ ಈಗಿನ ಹುಡುಗಿಯರನ್ನು ಯಾರು ಮಾತನಾಡಿಸಬೇಕು? ಕಂಡ ಕಂಡಲ್ಲಿ ದೋಸ್ತಿ ಮಾಡಿಕೊಳ್ಳುತ್ತಾರೆ. ಕೈಗೊಂದು ಮೊಬೈಲು, ಕಾಲಿಗೊಂದು ಸ್ಕೂಟಿ ಚಕ್ರ. ಅವರನ್ನು ಹಿಡಿಯೋರು ಯಾರು?'' ಎಂದು ಹೇಳಿದವಳು ಕಣ್ಣು ಬಾಯಿ ಕೈಗಳೆಲ್ಲ ಸೇರಿದಂತೆ ಮೂಕ ಅಭಿನಯ ಮಾಡಿ ಆ ಮೂಲಕ, ''ಆಕೆ ಬಹುಶಃ ಮೂರು ತಿಂಗಳ ಗರ್ಭಿಣಿ ಆಗಿರಬಹುದು. ಆದ್ದರಿಂದ ನೇಣಿಗೆ ಶರಣಾಗಿದ್ದಾಳೆ" ಎಂಬ ಅಂತಿಮ ವಾಕ್ಯವನ್ನು ಉಸುರಿದಳು.

ಆ ಸಂದರ್ಭದಲ್ಲಿಯೂ ಅವರ ಮಾತುಗಳನ್ನು ಕೇಳಿದ ಫೈಜಾ ಅತ್ಯಂತ ತುಚ್ಛ ಭಾವದಿಂದ ಅವರನ್ನು ನೋಡಿದಳು. ಹಾಗೆಯೇ ಸಾಲಿಹಾಳನ್ನು ಉದ್ದೇಶಿಸಿ, ''ನಿಮಗೆ ಎಷ್ಟು ಸಾರಿ ಹೇಳುವುದು ಚಿಕ್ಕಮ್ಮ. ಮೆಹೆಕ್‌ಳಿಗೆ ಮಾನಸಿಕವಾದ ತೊಂದರೆ ಇತ್ತು. ದೇಹಕ್ಕೆ ಜ್ವರ ಬಂದರೆ, ಹೊಟ್ಟೆ ನೋವಾದರೆ ಅದಕ್ಕೆ ಔಷಧಿಯನ್ನು ಕೊಡಿಸುತ್ತೀರಾ. ಆದರೆ ಮನಸ್ಸಿಗೆ ಕಾಯಿಲೆಯಾದರೆ ಔಷಧಿ ಕೊಡಿಸಲು ಹಿಂದೇಟು ಹಾಕ್ತೀರಿ. ಮತ್ತೆ ಅಂತಹ ಪಾಪದವರ ಮೇಲೆ ಇಲ್ಲಸಲ್ಲದ ಅಪವಾದಗಳನ್ನು ಬೇರೆ ಹೊರಿಸುತ್ತೀರಿ. ಇದು ಒಳ್ಳೆಯದಲ್ಲ" ಎಂದು ಜೋರು ಧ್ವನಿಯಲ್ಲಿಯೇ ನುಡಿದಳು. ಉದ್ದ ನಾಲಗೆಯ ಗಿಡ್ಡ ಜನರು, 'ಎಷ್ಟೊಂದು ಪೊಗರು ಇವಳಿಗೆ' ಎಂದುಕೊಂಡರು. ಇನ್ನುಳಿದವರು ಮೌನವಾದರು.

ಫೈಜಾಳ ಮಾತಿನಿಂದ ಸಾಲಿಹಾ ಎಚ್ಚೆತ್ತುಕೊಂಡಳು. ಆಕೆ ಅಡುಗೆ ಮನೆಗೆ ಹೋಗಿ ಒಂದು ಲೋಟ ನೀರನ್ನು ತಂದು ಸಾಲಿಹಾಗೆ ಕುಡಿಸಿದಳು. ನಂತರ ಸಾಲಿಹಾ ಮತ್ತೆ ವಾಸ್ತವಕ್ಕೆ ಬಂದಂತೆ ಆಯ್ತು. ಅವಳ ಹೊಟ್ಟೆಯೊಳಗೆ ಬೆಂಕಿ ಕೆಂಡಗಳ ಕುದಿ; ಎದೆಯು ಭಗ ಭಗನೇ ಉರಿಯುತ್ತಿತ್ತು. ಕಣ್ಣುಗಳು ಒಳಗೆ ಸೆಳೆದು ಹೋದಂತೆ ಉರಿ ಉರಿ ಉರಿಯುತ್ತಲೇ ರೆಪ್ಪೆಗಳನ್ನು ಬಿಡಿಸಲು ಅಸಾಧ್ಯವಾಗಿ ಅವಳು ಕುಳಿತಲ್ಲಿಯೇ ಗೋಡೆಗೊರಗಿ ಕೊಂಡಳು. ಒಂದು ಹನಿ ಕಣ್ಣೀರಾದರೂ ಇಣುಕಬೇಕಲ್ಲವೇ... ತಾಯಿ ಅಂತ ಆದ ಮೇಲೆ, ಹೆತ್ತು ಹೊತ್ತು ಜನ್ಮ ಕೊಟ್ಟ ಮೇಲೆ. ಅವಳ ಮೆದು ಅಂಗಾಲಿನಿಂದ ಕೆನ್ನೆಗೆ, ಎದೆಗೆ ಒದಿಸಿಕೊಂಡು ಪುಳಕ ಅನುಭವಿಸಿದ ಮೇಲೆ. ಅವಳ ನಸುಗೆಂಪು ಬಾಯಿಗೆ ತನ್ನ ಮೊಲೆ ತೊಟ್ಟನ್ನು ಇಟ್ಟು ಜೀವ ದ್ರವ್ಯವನ್ನು ಹರಿಸಿದ ಮೇಲೆ. ಅವಳ ತಲೆಗೂದಲನ್ನು ಬಾಚಿ ಅಪ್ಪಿ ಹಿಡಿದು ಅವಳ ಸ್ಪರ್ಶವನ್ನು ಅನುಭವಿಸಿದ ಮೇಲೆ! ಆದರೆ ಊಹೂಂ... ಏನೇ ಆದರೂ ಅವಳ ಕಣ್ಣಲ್ಲಿ ಒಂದು ಹನಿ ನೀರು ಜಾರಲಿಲ್ಲ. ಇಡೀ ದೇಹ ಉರಿದು, ದೇಹ ಮನಸ್ಸು ಮತ್ತು ಆತ್ಮದ ದ್ರವವು ಆರಿ ಹೋಗಿ ಮೋರೆಯು ಸುಟ್ಟ ಕಟ್ಟಿಗೆಯಂತಾಗಿತ್ತು. ತುಟಿಗಳು ಒಣಗಿ ಬರಗಾಲದ ಭೂಮಿಯಂತೆ ಬಿರುಕು ಬಿಟ್ಟಿದ್ದವು.

ಕಾಲ ಎಂದಿಗೂ ಯಾರಿಗೂ ಕಾಯುವುದಿಲ್ಲ. ಹೆಣದ ಅಂತ್ಯಕ್ರಿಯೆ ಮಾಡುವಲ್ಲಿ ತಡ ಮಾಡಕೂಡದು ಎಂಬ ಧಾರ್ಮಿಕ ಆದೇಶ ಬೇರೆ ಇದೆಯಲ್ಲ. ಯಾರದೇ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವುದು, ಅಂತ್ಯಕ್ರಿಯೆಯ ಕರ್ತವ್ಯದಲ್ಲಿ ಪಾಲುಗೊಳ್ಳುವುದು ಹಾಗೂ ಜನಾಜದ ಯಾತ್ರೆಯಲ್ಲಿ ಶವಕ್ಕೆ ಹೆಗಲು ಗೊಡುವುದು ಪವಿತ್ರ ಕಾರ್ಯಗಳು ಎಂದು ಪರಿಗಣಿತವಾಗಿದ್ದರಿಂದಲೇ ಅಲ್ಲಿ ಅಪಾರ ಜನರು ಸೇರಿದ್ದರು. ಮತ್ತು ಯಾರೂ ಹೇಳದಿದ್ದರೂ ನಿರ್ದೇಶಿಸದಿದ್ದರೂ ತಾವೇ